ಹಣಮಪ್ಪ ಅಲ್ಲ. ಇಳಸದನ್ನ ತಲ್ಯಾಗಿನ ಗುಡ್ಡಾ, ನಿನ ಕಾಯ್ಕೊಂಡ ಯಾಂವ ರಾಮನೂ ಕುಂತಿಲ್ಲ ಅಂವನ ತಮ್ಮನೂ. ಮದ್ಲ ಎರಡ ಮುಟಗಿ ಅನ್ನಾಅರೇ ಇಡಾಕ ಕಲಕೋ, ನಾ ವಾಟಗಾ ಸಾರ ಕೊಡ್ತೇನಂತ. ಕೂಳ ಕುದಸೂದಂದ್ರ ಘನಂದಾರೀ ಕೆಲಸೇನಲ್ಲಪಾ. ಜರಾ ಮನಸ ಮಾಡ. ಒಮ್ಮಿ ಅಡಗೀ ಹದಾ ತಿಳೀತೋ ಮುಗೀತ. ಮಣ್ಣೇನ, ಶೇಗಡೇನ, ಚುಮಣೀಎಣ್ಣೇನ, ಗ್ಯಾಸೇನ ಯಾವ ಒಲೀನರ ಆಗ್ಲಿ. ನಿನ್ನ ಹಿಡದಾವ್ರ ಯಾರಿಲ್ಲ."

ಎದ್ದು ತನ್ನ ಮನೆಗೆ ಹೋಗಿ, ಖಾಲೀ ಬಿಂದಿಗೆಯೊಂದಿಗೆ ಹೊರಬಂದು ಪಾವಟಣಿಗೆಗಳ ಬಳಿ ನಿಂತ. ಅವ ಕೆಳಗಿಳಿಯುವ ಲಕ್ಷಣ ಕಾಣದ್ದರಿಂದ ಕೈಯಲ್ಲಿ ಹಿಡಿದ ಪತ್ರಾವಳಿ ಗಂಟಿನಿಂದ ಅವನನ್ನು ತಿವಿದು ಸರಸರನೇ ಮೆಟ್ಟಲಿಳಿದಳು. ನಾಗರಾಳರ ಮನೆಗೆ ಪತ್ರಾವಳಿ ಕೊಟ್ಟು ಬರುವಾಗ ಚಾಳಿನ ಕಟ್ಟೆಯಿಂದ,

'ತಾಯೀ, ಪಂಪ್ ಸ್ಟೋ ಹತ್ತಿಗೊಂತನ?'

'ಸೂತ್ರಿಲ್ಲ ಸಂಬಂಧಿಲ್ಲ, ಯದಕ್ಕ ದಿನಾ ಅಂವನ ಜೀಂವಾ ಹಿಂಡತೀಯ?' 'ಬಿಡ್ರೀ ನಿಮ, ಹೆಂಗೋ ಒಟ್ಟ ಅಂವ ಉರಿ ಹಚ್ಚಾಕ ಕಲತ್ರ ಸಾಕಲ್ಲ?' ಅವರೆಲ್ಲ ಮುಸಿಮುಸಿ ನಗುತ್ತಿರುವಾಗಲೇ ಮಾಬೂ ದಡದಡನೇ ಇಳಿದುಬಂದ. ಕಟ್ಟೆಗೆ ಪಾವಟಣಿಗೆಗಳ ಸದ್ದು ಅವರ ಬಾಯಿ ಮುಚ್ಚಿಸಿತು.

ಇತ್ತ ಬಿಂದಿಗೆ ಕೊರಳಿಗೆ ಹಗ್ಗ ಬಿಗಿಸಿಕೊಂಡು ಬಾವಿಗಿಳಿಯಿತು. ಅದು ತುಂಬುವುದಕ್ಕೂ ತಾಯೀ ಇತ್ತ ಬರುವುದಕ್ಕೂ ಗಾಟಿಯಾಯಿತು. ಅವನೊಂದಿಗೆ ಹಗ್ಗಕ್ಕೆ ಕೈ ಹಚ್ಚಿದಳು. ತುಂಬಿದ ಬಿಂದಿಗೆ ಸರಸರನೆ ಮೇಲೆ ಬಂದಿತು. ಕಂಕುಳಲ್ಲಿ ಇಟ್ಟುಕೊಳ್ಳಲು ನೋಡಿದಾಗ, ಮಾಬೂ ಇಸಿದುಕೊಂಡು ತನ್ನ ಹೆಗಲಮೇಲೆ ಹೊತ್ತುಕೊಂಡ. ಚಾಳಿನೊಳಗಿನ ಮಬ್ಬು ಬೆಳಕನ್ನು ಸೀಳುತ್ತ ಹೋದ ಅವನ ರೀತಿಗೆ ಈಕೆ ಉಬ್ಬಿಹೋದಳು. 'ನಿನ್ನಂಥಾ ಶಂಬರ್ ಮಂದೀನ್ನ ಮಣಸಿದ ಕೈ ಇದು. ಬಿಟ್ಟೇನಾ ನಿನ್ನ? ನನ್ನ ಮ್ಯಾಲ ನಾನ ಆಣಿ ಹಾಕ್ಕೊಂಡಕ್ಯಾಸರ ನಿನ್ನ ನೆಟ್ಟಗ ಮಾಡತೇನಿ ನೋಡಾಕ್ಯಾ!'

ಬಿಂದಿಗೆಯನ್ನು ತನ್ನ ಮನೆಯಲ್ಲಿಟ್ಟು ವಾಪಾಸು ಸಲೂತಾಯಿಯ ಮನೆಗೆ ಬಂದು ಕುಳಿತ. ಆಕೆ ಖಾಕರಾ ಹದಕ್ಕೆ ಹಿಟ್ಟನ್ನು ಮಿದ್ದಿ ಒಂದೊಂದೇ ಉಳ್ಳಿ ಹರಿದು ಲಟ್ಟಿಸಲು ತಯಾರಿ ಮಾಡಿಕೊಳ್ಳುತ್ತಿದ್ದಳು. ಖಾಕರಾ ಲಟ್ಟಿಸಿ ಹಂಚಿನ ಮೇಲೆ ಹಾಕುತ್ತ, 'ನೋಡದ, ಹಿಂಗ ಅರವಿಯಿಂದ ಒಂದಳತೀಲೇ ಅದನ್ನ ಒತ್ತಕೋತ ತಿರಗಿಸ್ಕೋತ ಇರಬೇಕು'

'ತಾಯೀ, ಉಬ್ಬಲಿ ಬಿಡಲಾ' 'ಉಬ್ಬಿದ್ರ ಕೆಲಸ ಕೆಟ್ಟಂಗನೋ!' ಕುರುಕುರು ಖಾಕರಾಗೆ ಗುರೆಳ್ಳು ಹಿಂಡಿ, ಗಾಣದೆಣ್ಣೆ ಬೀಳುತ್ತಿದ್ದಂತೆ ಎರಡು ಹೆಜ್ಜೆ ಮುಂದೆ ಸರಿದ. ತಟ್ಟೆ ಎತ್ತಿಕೊಳ್ಳುತ್ತ, 'ಖರೇ ಹೇಳಿದೀ ನೋಡ, ಏಳೂ ಗುಳ್ಳೀನ ಹಿಚಕಿ ಹಿಚಕಿ ಒಡೀತಿರಬೇಕು. ಒಟ್ಟ ಉಬ್ಬಾಕ ಬಿಡಬಾರದು! ಉಬ್ಬಿದರ ಅದರದು ಒಂದ ದಿನದ ಉರವಣಿಗಿ. ಖಾಕರಾ ಅಂದ್ರ ನಾಕದಿನಾ ಅರೇ ಇಟ್ಟು ತಿನ್ನಾಕ ಬರೂಹಂಗ ಇರಬೇಕಲ್ಲ?' ಕುಳಿತವ ಎದ್ದುನಿಂತು ಒಮ್ಮೆ ಗಂಟಲು ಸರಿ ಮಾಡಿಕೊಂಡ. 'ಹೆಂಗ ಹೋಗ್ಯಾಳಲ್ಲಾ, ಹಂಗಕೀ ಪರತ ಬರಾಕ ಬೇಕು. ನಾ ಇಲ್ಲದ ಮಂದ್ಯಾಗ ತಲೀ ಎತ್ತಾಕ ಆಕ್ಕೇತಿ ಅಕಿಗೆ?' ಮತ್ತೆ ಗಂಟಲು ಸರಿ ಮಾಡಿಕೊಂಡು ಅಲ್ಲಿಂದ ಹೊರಟ. ಪಂಪ್ ಸ್ಟೋ ಗಳಗಳವೆಂದು ತನ್ನ ಉರಿಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿತ್ತು.

* * *

ಸಂಜೆ ಗಣಪತಿಯ ಪೆಂಡಾಲ್ ಎದುರು ಊರ ಗಂಡಸರೆಲ್ಲಾ ಜಮಾಯಿಸಿದ್ದರು. ಮುಂಬೈನ ಚಿಮಣಾ ಜಮುನಾಳ ಲಾವಣಿ ನೋಡಲು ಅರ್ಧಗಂಟೆ ಮೊದಲೇ ಬಂದು ಜಾಗ ಹಿಡಿದುಕೊಂಡಿದ್ದರು. ಅಷ್ಟೊತ್ತಿಗೆ ನಾಲ್ಕೈದು ಜನ ಜೈಕಾರ ಹಾಕುತ್ತ, ವೇದಿಕೆಯ ಬದಿಯಲ್ಲಿ ಒಂದು ಟೇಬಲ್ ಹಾಕಿ ಅದರ ಮೇಲೆ ಒಲೆಯನ್ನಿಟ್ಟರು. ಅರಿಷಿಣ ಕುಂಕುಮ ಬಳಿದುಕೊಂಡ ಅದು ಚೆಂಡುಹೂವಿನ ಹಾರವನ್ನೂ ಥಾಳಾಗಿ ಹಾಕಿಸಿಕೊಂಡಿತ್ತು. ಅದರ ಮುಂದೆ ನಾಲ್ಕೈದು ಫಲಕಗಳನ್ನೂರಲಾಯಿತು: ಒಲೆ ಹೊತ್ತಿ ಉರಿದೊಡೆ ಮನೆಯೊಂದು ನಂದನ; ಸೌದೆಯ ಬೂದಿಯೇ ಸೌಭಾಗ್ಯ ನಿಧಿಯೇ; ಒಲೆಯ ಸ್ಥಾಪನೆಯಿಂದಲೇ ಕುಟುಂಬದ ಉತ್ಥಾನ; ಹೆಣ್ಣು ಮಣ್ಣು ನಮ್ಮ ಸಂಸ್ಕೃತಿಯ ಕಣ್ಣು ಗಿಣ್ಣು ಹಾಲು ಹೈನು ಇತ್ಯಾದಿ. ಜುಬ್ಬಾ ಪಾಯಿಜಾಮಾ ತೊಟ್ಟು, ಬಿಳೀಟೋಪಿ, ತುಳಸೀಮಾಲೆ ಧರಿಸಿ ಅಲ್ಲಿಗೆ ಬಂದ ಮಾಬಳೇಶನನ್ನು ಕಂಡು ಅವನ ಹಿಂಬಾಲಕರು ಜೈಕಾರ ಹಾಕಿದರು. ಏನು ನಡೆಯುತ್ತಿದೆ ಎನ್ನುವುದು